**ದಿನಾಂಕ 02-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ-**

21. ದಾವಾ ರಸ್ತೆ 30 ಅಡಿ ಇದೆ ಎಂದು ತೋರಿಸಲು ನನ್ನ ಮನೆಯ ದಾಖಲೆಗಳನ್ನು & ದಾರಿಗೆ ಸಂಬಂಧಿಸಿದ ದಾಖಲೆಗಳನ್ನು ಕೊಟ್ಟಿದ್ದೇನೆ. ನಮ್ಮ ಖಾಗದಗಳಲ್ಲಿ ಬರೆದ ಮಾಹಿತಿಗಳ ಬಗ್ಗೆ ನನಗೆ ಗೊತ್ತಿದೆ. ನೀವು ಹಾಕಿರುವ ಯಾವ ದಾಖಲೆಯಲ್ಲಿ ದಾವಾ ಆಸ್ತಿ 30 ಅಡಿ ಎಂದು ಬರೆದಿದೆ ಎಂದರೆ ಸಾಕ್ಷಿಯು ನಮ್ಮ ಮನೆಯ ಕ್ರಯಪತ್ರದಲ್ಲಿ ಬರೆದಿದೆ ಎನ್ನುತ್ತಾರೆ. ಮತ್ತೆ ಬೇರೆ ಯಾವ ದಾಖಲೆ ಎಂದರೆ ಸಾಕ್ಷಿಯು ನಕ್ಷೆ ಇದೆಯಲ್ಲಾ ಅದರಲ್ಲಿ ಇದೆ ಎನ್ನುತ್ತಾರೆ.

22. ಸಾಕ್ಷಿಗೆ ತನ್ನ ಮುಖಾಂತರ ನಿಶಾನೆಗೊಂದ ದಾಖಲೆಗಳನ್ನು ತೋರಿಸಿ, ಸದರಿ ದಾಖಲೆಗಳು ನಿಮ್ಮ ಮುಖಾಂತರ ನಿಶಾನೆಗೊಂಡ ದಾಖಲೆಗಳು ಎಂದರೆ ಸರಿ. ನಿಮ್ಮ ಖರೀದಿ ಪತ್ರ & ನಕ್ಷೆಯನ್ನು ನೀವು ನ್ಯಾಯಾಲಯಕ್ಕೆ ಹಾಕಿಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಎಲ್ಲಾ ದಾಖಲೆಗಳನ್ನು ನಾನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ಪುನಃ ಅದೇ ಪ್ರಶ್ನೆಯನ್ನು ಕೇಳಲಾಗಿ ನಾನು ಎಲ್ಲಾ ದಾಖಲೆಗಳನ್ನು ವಕೀಲರಿಗೆ ಕೊಟ್ಟಿದ್ದೆ ಎನ್ನುತ್ತಾರೆ. ನಿಮ್ಮ ಪ್ರಕಾರ ಆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿಯು ಹೌದು ಇವೆ ಎನ್ನುತ್ತಾರೆ.

23. ಕಳೆದ ಬಾರಿ ನೀವು ಸಾಕ್ಷಿ ಹೇಳಲು ಬಂದಾಗ ನಿಮ್ಮ ಬ್ಲೂ ಪ್ರಿಂಟ್ ಮ್ಯಾಪ್ & ಪರವಾನಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಕುತ್ತೇನೆ ಎಂದು ಹೇಳಿದ್ದಿರಿ, ತಂದಿದ್ದೀರಾ ಎಂದರೆ ಸಾಕ್ಷಿಯು ನಾನು ಆ ರೀತಿ ಹೇಳಿಲ್ಲ ಎನ್ನುತ್ತಾರೆ. ನೀವು ಆ ರೀತಿ ಹೇಳಿದ್ದರೂ ಸಹ, ಹೇಳಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

24. ನಿಮ್ಮ ಪರವಾಗಿ ವೀಡಿಯೋ & ಫೋಟೋಗಳನ್ನು ಯಾವ ಕಾರಣಕ್ಕಾಗಿ ಹಾಕಿಲ್ಲ ಎಂದರೆ ಸಾಕ್ಷಿಯು ನನಗೆ ಕೇಳಿಲ್ಲ ಆದ್ದರಿಂದ ಕೊಟ್ಟಿಲ್ಲ ಎನ್ನುತ್ತಾರೆ. ಯಾರು ಕೇಳಿಲ್ಲ ಎಂದರೆ ಸಾಕ್ಷಿಯು ನಮ್ಮ ವಕೀಲರು ಕೇಳಿಲ್ಲ ಎನ್ನುತ್ತಾರೆ.

25. ದಾವಾ ಆಸ್ತಿ 30 ಅಡಿ ಇದೆ ಎಂದು ಡಿಕ್ಲೇರ್ ಮಾಡಲು ನೀವು ಕೇಳಿಲ್ಲ ಎಂದರೆ ಸಾಕ್ಷಿಯು ಇಲ್ಲ ಪರಿಹಾರ ಕೇಳಿಲ್ಲ, ಯಾರಿಗಂತಾ ಕೇಳಲಿ ಎನ್ನುತ್ತಾರೆ.

26. ನಾನು ಇಲ್ಲಿಯವರೆಗೆ ಪ್ರತಿವಾದಿಯರ ವಿಭಾಗ ಪತ್ರ & ತಿದ್ದುಪಡಿ ಪತ್ರವನ್ನು ಎಲ್ಲಿಯೂ ಪ್ರಶ್ನಿಸಿಲ್ಲ.

27. ನಿಮ್ಮ ದಾವೆಯಲ್ಲಿ ನಿಮ್ಮ ಖರೀದಿ ಪತ್ರದ ಸಂಖ್ಯೆಯನ್ನು ಎಲ್ಲಿಯೂ ಹೇಳಿಲ್ಲ ಎಂದರೆ ಸರಿ.

28. ನಿಮ್ಮ ದಾವೆಯಲ್ಲಿ ನೀವು 10 ಗುಂಟೆಯನ್ನು ಡೆಮಾಲಿಶ್ ಮಾಡಿ ಎಂದು ಕೇಳಿದ್ದೀರಿ ಎಂದರೆ ಸರಿ. ನಿಮ್ಮನ್ನು ಹೊರತುಪಡಿಸಿ ಸುತ್ತಮುತ್ತಲಿನವರು ಯಾರೂ ನಿಮ್ಮೊಂದಿಗೆ ಕೈ ಜೋಡಿಸಿಲ್ಲ ಎಂದರೆ ಸರಿ.

29. ನಿಮ್ಮ ಪ್ಲಾಟ್, ದಾವಾ ರಸ್ತೆ & ನಿಮ್ಮ ಕಟ್ಟಡವನ್ನು ಕಮೀಷನರ್ ಮುಖಾಂತರ ಅಳತೆ ಮಾಡಿಸಲು ಸಿದ್ದರಿದ್ದೀರೇ ಎಂದರೆ ಸಾಕ್ಷಿಯು ಸಿದ್ದನಿದ್ದೇನೆ ಎನ್ನುತ್ತಾರೆ.

30. ನಾನು ಕಟ್ಟಿದ ನಮ್ಮ ಕಟ್ಟಡದ ಅಳತೆ 25 X 26. 2012 ರಲ್ಲಿ ಪ್ರತಿವಾದಿಯ ವಿರುದ್ಧ ಒಂದು ದಾವೆ ಹಾಕಿದ್ದೆ ಎಂದರೆ ಸರಿ. ಸದರಿ ದಾವೆಯ ವಿಷಯ ಆ ದಾವೆ ಯಲ್ಲಿ ಇತ್ತು ಎಂದರೆ ಸರಿ. ಆ ದಾವೆಯಲ್ಲಿಯೂ ಸಹ ಪ್ರತಿವಾದಿ 10 ಅಡಿ ರಸ್ತೆ ಒತ್ತುವರಿ ಮಾಡಿದ್ದಾರೆಂದು ಹಾಕಿದ್ದೆ ಎಂದರೆ ಸರಿ.

31. ನ್ಯಾಯಾಲಯವು ನೀವು ಕಟ್ಟಿರುವ ಕಟ್ಟಡ ಬೀಳಿಸಬೇಕು ಎಂದು ಆದೇಶ ಮಾಡಿದರೆ ಬೀಳಿಸುತ್ತೀರಾ ಎಂದರೆ ಸಾಕ್ಷಿಯು ಹೌದು ಬೀಳಿಸುತ್ತೇನೆ ಎನ್ನುತ್ತಾರೆ.

32. ನೀವು ಪ್ರತಿವಾದಿಗೆ ಕಾನೂನು ರೀತ್ಯ ತುಂಬಾ ಕಿರುಕುಳ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ಕೇಸ್ ಹಾಕಿದ್ದೇನೆ ಎನ್ನುತ್ತಾರೆ.

33. ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಅದರಲ್ಲಿ ದಾರಿ ಎಂದು ಮಾತ್ರ ನಮೂದು ಇದೆ, 30 ಅಡಿ ದಾರಿ ಎಂದು ನಮೂದು ಇಲ್ಲ ಎಂದು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಭಾಗವನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು. ಅದೇ ರೀತಿಯಾಗಿ ನಿಪಿ-2 ನ್ನು ತೋರಿಸಲಾಗಿ ಅದರಲ್ಲಿ ದಾರಿ ಎಂದು ಮಾತ್ರ ನಮೂದು ಇದೆ, 30 ಅಡಿ ದಾರಿ ಎಂದು ನಮೂದು ಇಲ್ಲ ಎಂದು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಭಾಗವನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು.

34. 30 ಅಡಿ, 40 ಅಡಿ, 80 ಅಡಿ ರಸ್ತೆ ಇದೇ ಎಂದಾದರೆ ಅದನ್ನು ಫಾರಂ.3 ರಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ. 30 ಅಡಿ ರಸ್ತೆ ಇಲ್ಲದ ಪಕ್ಷದಲ್ಲಿ ಮಾತ್ರ ಮುನಿಸಿಪಾಲಿಟಿಯವರು ಕೇವಲ ರಸ್ತೆ ಎಂದು ನಮೂದು ಮಾಡುತ್ತಾರೆ ಎಂದರೆ ಸರಿ.

35. ದಾವಾ ರಸ್ತೆ 30 ಅಡಿ ಇಲ್ಲ, ಆ ಬಗ್ಗೆ ಯಾವುದೇ ದಾಖಲೆ ಇಲ್ಲದೇ ಇದ್ದರೂ ಸಹ ಪ್ರತಿವಾದಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಈ ರೀತಿ ಸುಳ್ಳು ದಾವೆ ಹಾಕಿದ್ದೀರಿ ಎಂದರೆ ಸಾಕ್ಷಿಯು ನಮ್ಮ ಕ್ರಯಪತ್ರದಲ್ಲಿ ದಾರಿ ಇದೆ ಎಂದಾದ ಮೇಲೆಯೇ ನಾವು ನ್ಯಾಯಾಲಯಕ್ಕೆ ಬಂದಿದ್ದೇನೆ ಎನ್ನುತ್ತಾರೆ.

36. ಮುನಿಸಿಪಾಲಿಟಿಯವರು ನಮ್ಮ & ಪ್ರತಿವಾದಿಗಳ ದಾಖಲೆಗಳನ್ನು ಪರಿಶೀಲಿಸಿರುತ್ತಾರೆ. ಸದರಿಯವರು ಸೇಲ್ ಡೀಡ್, ಕಟ್ಟಡ ಪರವಾಗಿಗೆ, ಬ್ಲೂ ನಕ್ಷೆ, ಅರ್ಜಿ &

ಪ್ಲಾಟಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಸಿರುತ್ತಾರೆ. ಈ ದಾಖಲೆಗಳನ್ನು ಮುಂದಿನ ದಿನಾಂಕದಲ್ಲಿ ನ್ಯಾಯಾಲಯಕ್ಕೆ ಕೊಡಲು ಸಿದ್ದರಿದ್ದೀರೇ ಎಂದರೆ ಸಾಕ್ಷಿಯು ಹೌದು ಕೊಡಲು ಸಿದ್ದನಿದ್ದೇನೆ ಎನ್ನುತ್ತಾರೆ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**